ದಿನಾಂಕ: 05-10-2023 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ. ಎಮ್ ಆರ್ ಆರ್ ವಕೀಲರಿಂದ:

ಮುಪ್ಪನಯ್ಯ ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿ ಡಿ 8 ಎಂದು, ಎಮ್ ಆರ್ ದಾಖಲಾತಿಯನ್ನು ನಿ ಡಿ 9 ಎಂದು, ಸರ್ವೆ ನಂಬರ್ 198 ಬನ್ನಿಗೋಳ ಗ್ರಾಮದ 02 ಪಹಣಿಗಳನ್ನು ನಿ ಡಿ 10 ಮತ್ತು 11 ಎಂದು, ಕಂದಾಯ ರಸೀದಿಯನ್ನು ನಿ ಡಿ 12 ಎಂದು, ಎಮ್ ಆರ್ ಹೆಚ್ 30/2013-14 ನ್ನು ನಿ ಡಿ 13 ಎಂದು, ಸರ್ವೆ ನಂಬರ್ 198 ಬನ್ನಿಗೋಳ ಗ್ರಾಮದ ಪಹಣಿಗಳನ್ನು ನಿ ಡಿ 14 ರಿಂದ 17 ಎಂದು, ಭೂ ಹಿಡುವಳಿ ಪ್ರಮಾಣ ಪತ್ರವನ್ನು ನಿ ಡಿ 18 ಎಂದು, ಗೇಣಿ ರಹಿತ ದೃಢೀಕರಣ ಪತ್ರವನ್ನು ನಿ ಡಿ 19 ಎಂದು, ಇ ಸಿ ದಾಖಲಾತಿಯನ್ನು ನಿ ಡಿ 20 ಎಂದು, ಚೆಕ್ ಬಂದಿ ಪ್ರಮಾಣ ಪತ್ರವನ್ನು ನಿ ಡಿ 21 ಎಂದು, ವಂಶಾವಳಿಯನ್ನು ನಿ ಡಿ 22 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ ಟಿ ವಿ ವಕೀಲರಿಂದ** :

1. ನಾನು 7 ನೆ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮಗ ನಾಗರಾಜ ವಕೀಲ ವೃತ್ತಿ ಮಾಡುತ್ತಾನೆಂದರೆ ಸರಿ. 1975 ರಿಂದ ವಿಮ್ಸ್ ಆಸ್ಪತ್ರೆ ಬಳ್ಳಾರಿಯಲ್ಲಿ ಸ್ವಂತ ಹೋಟೆಲ್ ಹಾಕಿದ್ದರು ಎಂದರೆ ಸರಿಯಲ್ಲ. ಮುಪ್ಪನಯ್ಯನವರಿಗೆ ಅವರ ತಾತಾ ಮುತ್ತಾತನ ಹೆಸರು ಇಟ್ಟಿದ್ದಾರೆಂದರೆ ಸರಿ. ಆ ಕಾರಣದಿಂದ ಆತನಿಗೆ ಪ್ರೀತಿಯಿಂದ ಶಿವಾನಂದ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಮುಪ್ಪನಯ್ಯ ಮತ್ತು ಶಿವಾನಂದ ಎರಡು ಒಂದೆ ಹೆಸರು ಎಂದರೆ ಸರಿಯಲ್ಲ. ವಿಮ್ಸ್ ಆಸ್ಪತ್ರೆ ಬಳ್ಳಾರಿಯಲ್ಲಿ ಅವರು ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಈರಮ್ಮನಿಗೆ ಆವಾಗ ಆವಾಗ ಬಂದು ದುಡ್ಡು ಕೊಟ್ಟು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಅದೇ ಆಸ್ಪತ್ರೆಯಲ್ಲಿ ದುರಗಮ್ಮ ಎನ್ನುವವರು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದುರಗಮ್ಮ ಮುಪ್ಪನಯ್ಯನ ಹೋಟೆಲ್ ಗೆ ಬಂದು ಹೋಗುತ್ತಿದ್ದರು

ಕ್ಯಾಂಪಸ್ ನಲ್ಲಿ ಇರುತ್ತಿದ್ದರು ಎಂದರೆ ಗೊತ್ತಿಲ್ಲ. ನಂತರ ದುರಗಮ್ಮ ಮತ್ತು ಮುಪ್ಪನಯ್ಯ ಸ್ನೇಹ ಬೆಳೆದು ಒಬ್ಬರಿಗೊಬ್ಬರು ಮದುವೆಯಾದರು ಎಂದರೆ ಸರಿಯಲ್ಲ. ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಮದುವೆಯಾಯಿತು ನಾವು ಹೋಗಲಿಲ್ಲ ಎಂದರೆ ಸರಿಯಲ್ಲ. ಮುಪ್ಪನಯ್ಯ ಮತ್ತು ದುರಗಮ್ಮ ನ ದಾಂಪತ್ಯ ಜೀವನದಿಂದ ನಾಗವೇಣಿ, ಸುಮಿತ್ರಾ ರುದ್ರೇಶ ಮಕ್ಕಳಾದರು ಎಂದರೆ ಸರಿಯಲ್ಲ. ತಂದೆಯ ಮೇಲೆ ಮಮಕಾರ ಇದ್ದಿದ್ದರಿಂದ ಆತ ರುದ್ರೇಶ ಅಂತಾ ತನ್ನ ಮಗನಿಗೆ ಹೆಸರಿಟ್ಟಿದ್ದ ಎಂದರೆ ಸರಿಯಲ್ಲ.

2. ಮುಪ್ಪನಯ್ಯ ಮುದಗಲ್ ಗೆ ಬಂದು ಹೋಗಿ ಮಾಡುತ್ತಿದ್ದ ಎಂದರೆ ಸರಿ. ನಿ ಪಿ 31 ರಲ್ಲಿ ಮುಪ್ಪನಯ್ಯ ಉರ್ಫ್ ಶಿವಾನಂದ ಎಂದು ಇದೆ ಎಂದರೆ ನಾವು ಮುಪ್ಪನಯ್ಯ ಎಂದು ಕರೆಯುತ್ತೇವೆಂದು ನುಡಿಯುತ್ತಾರೆ. ಅದೇ ರೀತಿ ನಿ ಪಿ 33 ರಲ್ಲಿ ಲೇಟ್ ಮುಪ್ಪನಯ್ಯ ಎಂದು ನಮೂದು ಇದೆ ಎಂದರೆ ಸರಿ. ನಿ ಪಿ 34 ರಂತೆ ನಾವು ಮುಪ್ಪನಯ್ಯ ತೀರಿಕೊಂಡಿದ್ದಾನೆ ಎಂದು ಮರಣ ಪ್ರಮಾಣ ಪತ್ರ ಪಡೆದುಕೊಂಡಿದ್ದೇವೆಂದರೆ ಸರಿ. ಮುಪ್ಪನಯ್ಯ 2004 ರಲ್ಲಿ ತೀರಿಕೊಂಡಿದ್ದಾನೆಂದರೆ ಸರಿಯಲ್ಲ. ಮುಪ್ಪನಯ್ಯ ಬಳ್ಳಾರಿ ವಿಮ್ಸ್ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆಂದರೆ ಸರಿಯಲ್ಲ. ಶವಸಂಸ್ಕಾರವನ್ನು ಬಳ್ಳಾರಿಯಲ್ಲಿ ಮಾಡಿದ್ದಾರೆಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಮದ್ಯಾಹ್ನದ ಅವಧಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
ಸಹಿ/-
(ಚಂದ್ರಶೇಖರ.ಪಿ.ದಿಡ್ಡಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗೂರು